2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.22/2025
ಪಿ.ಡಬ್ಲ್ಯೂಃ 3
ಸಿ.ಡಬ್ಲ್ಯೂಃ 27

| | |
|---|---|
| ಸಾಕ್ಷಿಯ ಹೆಸರುಃ | ಶ್ರೀ. ರಾಜು ದುಂಡಪ್ಪಾ ಪದ್ಮನ್ನನವರ |
| ತಂದೆಯ ಹೆಸರುಃ | ದುಂಡಪ್ಪಾ ಪದ್ಮನ್ನನವರ |
| ವಯಸ್ಸುಃ | 56 ವರ್ಷ |
| ಉದ್ಯೋಗಃ | ಗುತ್ತಿಗೆದಾರರು |
| ವಾಸಃ | ಆಂಜನೇಯ ನಗರ, ಬೆಳಗಾವಿ |

**ದಿನಾಂಕಃ 14.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

(ಆರೋಪಿತರ ಪರ ವಕೀಲರು ಗೈರು ಹಾಜರಿರುತ್ತಾರೆ. ಆದರೆ ಈ ಸಾಕ್ಷಿಯು ನೀಡುತ್ತಿರುವ ಸಾಕ್ಷಿಯು ಆರೋಪಿತರಿಗೆ ಕೇಳಿಸುತ್ತಿದೆ ಎಂದು ಜೈಲಿ ವಾರ್ಡರ್ ಆದ ಶ್ರೀದೇವಿ ದಳವಾಯಿ ರವರ ಮೂಲಕ ಪರೀಕ್ಷಿಸಿ ದೃಢೀಕರಿಸಿಕೊಳ್ಳಲಾಯಿತು. ಆರೋಪಿತರ ಪರ ವಕೀಲರು ಉದ್ದೇಶಪೂರ್ವಕವಾಗಿ ಈ ಪ್ರಕರಣದ ವಿಚಾರಣೆಯನ್ನು ವಿಳಂಬಗೊಳಿಸುವ ಮನಸ್ಥಿತಿಯನ್ನು ಇಟ್ಟುಕೊಂಡು ಗೈರು ಹಾಜರಾಗುವುದು ಹಾಗೂ ಸಾಕ್ಷಿಗಳು ಬಂದಾಗ ಯಾವುದೇ ಸಕಾರಣವಿಲ್ಲದೇ ಪಾಟೀ ಸವಾಲಿಗೆ ಸಮಯ ತೆಗೆದುಕೊಳ್ಳುವುದನ್ನು ಈ ನ್ಯಾಯಾಲಯವು ಗುರುತಿಸಿದೆ. ಆ ಕಾರಣಕ್ಕಾಗಿ ಈ ಪ್ರಕರಣದ ವಿಚಾರಣೆಯನ್ನು ತ್ವರಿತಗತಿಯಲ್ಲಿ ಮುಂದುವರೆಸುವ ಉದ್ದೇಶದಿಂದ ಆರೋಪಿತರಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಿಯಿಂದ ಆರೋಪಿತರಿಗೆ ವಕೀಲರ ಸೇವೆಯನ್ನು ನೀಡಲು ಆದೇಶಿಸಿ ಈ ದಿನವೇ ಅವರ ಉಪಸ್ಥಿತಿಯನ್ನು ನ್ಯಾಯಾಲಯದಲ್ಲಿಡಲು ತಿಳಿಸಲಾಗಿದೆ).

1. ಸಂತೋಷ ಪದ್ಮನ್ನನವರ ನನ್ನ ತಮ್ಮ. ಚಾಸಾಃ 1, 24 ಹಾಗೂ 25 ಆತನ ಮಕ್ಕಳು. ಈ ಪ್ರಕರಣದ 1 ನೇ ಆರೋಪಿಯು ಆತನ ಹೆಂಡತಿ. ಚಾಸಾಃ 26 ನನ್ನ ಅಣ್ಣನ ಮಗ. 5

ನೇ ಆರೋಪಿಯು 1 ನೇ ಆರೋಪಿಯ ತಮ್ಮ. ನನ್ನ ತಮ್ಮ ಸಂತೋಷ ಪದ್ಮನ್ನನವರ ಈಗ ಬದುಕಿಲ್ಲ. ದಿಃ 09.10.2024 ರಂದು ಆತನನ್ನು ಕೊಲೆ ಮಾಡಲಾಗಿದೆ.

2. ನಮ್ಮ ತಂದೆ–ತಾಯಿಗೆ ನಾವು 4 ಜನ ಅಣ್ಣ–ತಮ್ಮಂದಿರು. ಎಲ್ಲರೂ ಮದುವೆಯಾಗಿ ತಮ್ಮ ತಮ್ಮ ಕುಟುಂಬದೊಂದಿಗೆ ಬೇರೆ ಬೇರೆಯಾಗಿಯೇ ವಾಸಿಸುತ್ತೇವೆ. ಅದೇರೀತಿ ನನ್ನ ತಮ್ಮ ಮೃತ ಸಂತೋಷ ಪದ್ಮನ್ನನವರ 1 ನೇ ಆರೋಪಿಯನ್ನು ಮದುವೆಯಾಗಿ ಆತನಿಗೆ ಚಾಸಾಃ 1, 24 ಮತ್ತು 25 ರವರು  ಮೂರು ಜನ ಮಕ್ಕಳಿದ್ದು ಆತ ತನ್ನ ಸಂಸಾರದೊಂದಿಗೆ ಬೆಳಗಾವಿಯ ಆಂಜನೇಯ ನಗರದಲ್ಲಿರುವ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದ.

3. ನನ್ನ ತಮ್ಮ ಕೊಲೆಯಾಗುವ 6 ತಿಂಗಳ ಹಿಂದೆ 1 ನೇ ಆರೋಪಿ ಹಾಗೂ ನನ್ನ ತಮ್ಮನ ನಡುವೆ ಸಾಕಷ್ಟು ಜಗಳ ನಡೆಯುತ್ತಿತ್ತು. ವಿಚಾರ ತಿಳಿದ ನಾನು ಮನೆಯಲ್ಲಿ ಬೆಳೆದ ಮಕ್ಕಳಿದ್ದಾರೆ ಅವರುಗಳ ಮುಂದೆ ಜಗಳ ಮಾಡಿದರೆ ಅವರ ಭವಿಷ್ಯಕ್ಕೆ ತೊಂದರೆ ಆಗುತ್ತದೆ ಎಂದು ಬುದ್ದಿವಾದ ಹೇಳಿದ್ದೆ. ಆ ಕಾಲಕ್ಕೆ ನನ್ನ ತಮ್ಮನು 1 ನೇ ಆರೋಪಿಯು ಶೋಭಿತಗೌಡ ಎಂಬಾತನ ಜೊತೆ ಸತತವಾಗಿ ಫೋನ್ ಸಂಭಾಷಣೆ ಮಾಡುತ್ತಿರುತ್ತಾಳೆ ಆ ಬಗ್ಗೆ ನನ್ನ ಬಳಿ ಕಾಲ್ ರೆಕಾರ್ಡ ಸಹ ಇದೆ ಎಂದು ಹೇಳಿದ್ದ. ಅದಕ್ಕೆ ನಾನು ಆಕೆಗೂ ಸಹ ಆ ರೀತಿ ಮಾಡಬೇಡ ಎಂದು ಬುದ್ಧಿವಾದ ಹೇಳಿದ್ದೆ.

4. ದಿಃ 09.10.2024 ರ ರಾತ್ರಿ 09.20 ಗಂಟೆಗೆ ನನ್ನ ಅಣ್ಣನ ಮಗ ವಿಶಾಲ ಪದ್ಮನ್ನನವರ ಕರೆ ಮಾಡಿ ಈ ತಕ್ಷಣ ಸಂತೋಷ ಪದ್ಮನ್ನನವರ ಮನೆಯ ಬಳಿ ಬನ್ನಿ ಎಂದು ಹೇಳಿದ. ಅದರಂತೆ ನಾನು ನನ್ನ ತಮ್ಮ ಸಂತೋಷ ಪದ್ಮನ್ನನವರ ಮನೆಗೆ ಹೋದೆ. ಆಗ ನಮಗೆ ಪರಿಚಯವಿದ್ದ ಡಾಃ ಕುಲಕರ್ಣಿ ರವರು, ಚಾಸಾಃ 26 ವಿಶಾಲ, ನನ್ನ ತಮ್ಮನ ಇಬ್ಬರು ಮಕ್ಕಳು ಚಾಸಾಃ 24 ಮತ್ತು 25 ರವರು ಮನೆಯ ಹಾಲ್ ನ ಸೋಪಾದ ಮೇಲೆ ಕುಳಿತಿದ್ದರು. ಆಗ 1 ನೇ ಆರೋಪಿಯು ಅಲ್ಲೇ ನಿಂತಿದ್ದರು. ಆಗ ವೈದ್ಯರನ್ನು ಏನು ಎಂದು ಕೇಳಿದ್ದು ಅದಕ್ಕೆ ಅವರು ನಿಮ್ಮ ತಮ್ಮನ ಹಾರ್ಟ್ ಬಿಟ್ ಮತ್ತು ಪಲ್ಸನ್ನು ಪರೀಕ್ಷಿಸಿದ್ದು ಆಗ ಆತ ಮೃತ ಹೊಂದಿದ್ದಾನೆಂದು ಹೇಳಿದರು. ವೈದ್ಯರನ್ನು ನನ್ನ ತಮ್ಮ ಯಾವ ಕಾರಣಕ್ಕಾಗಿ

ತೀರಿಕೊಂಡಿದ್ದಾನೆಂದು ಕೇಳಿದೆ ಅದಕ್ಕೆ ಅವರು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಬೇಕು ಎಂದು ಹೇಳಿದರು.

5. ನಂತರ 1 ನೇ ಆರೋಪಿಯನ್ನು ನೀನು ಈ ಮೊದಲೇ ನನಗೆ ಕರೆ ಮಾಡಬೇಕಾಗಿತ್ತು ಯಾಕೆ ಮಾಡಲಿಲ್ಲ ಎಂದು ಕೇಳಿದೆ. ಅದಕ್ಕೆ ಆಕೆಯು ಈ ಮೊದಲೇ ನನ್ನ ತಮ್ಮ ಪ್ರಶಾಂತನಿಗೆ ಫೋನ್ ಮಾಡಿದ್ದು ಆತನು ತನ್ನ ಜೊತೆ ಒಬ್ಬ ಸ್ಟಾಫ್ ನ್ನು ಕರೆದುಕೊಂಡು ಬಂದು ಸಂತೋಷ ಪದ್ಮನ್ನನವರ ಪಲ್ಸನ್ನು ಪರೀಕ್ಷಿಸಿ ಆತ ತೀರಿಕೊಂಡಿದ್ದಾನೆಂದು ಹೇಳಿ ಹೋದ ಎಂದು ತಿಳಿಸಿರುತ್ತಾಳೆ. ಆ ಕಾಲಕ್ಕೆ ನಮ್ಮ ಸಂಬಂಧಿಕರು ಅಲ್ಲಿಗೆ ಬಂದಿದ್ದು ಅವರ ಸಹಾಯದಿಂದ ನನ್ನ ತಮ್ಮನ ಶವವನ್ನು ಲೇಕ್ ವ್ಯೂ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆಗ ಆಸ್ಪತ್ರೆಯಲ್ಲಿ ನನ್ನ ತಮ್ಮನ ಇಸಿಜಿ ಪಲ್ಸನ್ನು ಪರೀಕ್ಷಿಸಿದ್ದು ಅದು ಜಿರೋ ಎಂದು ತೋರಿಸುತ್ತಿತ್ತು ಅದಕ್ಕೆ ವೈದ್ಯರು ನಿಮ್ಮ ತಮ್ಮ ಈಗ್ಗೆ ಬಹಳ ಹಿಂದೆ ತೀರಿಕೊಂಡಿದ್ದಾನೆ ಶವವನ್ನು ತೆಗೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಆದರೆ ಮೃತನ ಮಗಳು ಬೆಂಗಳೂರಿನಲ್ಲಿ ಕಲಿಯುತ್ತಿದ್ದರಿಂದ ಆಕೆ ಬರುವವರೆಗೂ ಶವವನ್ನು ಆಸ್ಪತ್ರೆಯ ಶೀತಾಗಾರದಲ್ಲೇ ಇಟ್ಟುಕೊಳ್ಳಿ ಎಂದು ಲಿಖಿತವಾಗಿ ಮನವಿ ಮಾಡಿಕೊಂಡಿರುತ್ತೇನೆ ಅದರಂತೆ ಇಟ್ಟುಕೊಂಡಿರುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ನಾನು ನೀಡಿದ ಮನವಿಯ ಪ್ರತಿ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 3 ಎಂದು ಗುರುತಿಸಲಾಯಿತು.

6. ಸಾಕ್ಷಿ ಮುಂದುವರೆದು ಹೇಳುತ್ತಾರೆ ನಮ್ಮ ಮನೆಯಲ್ಲಿ ಯಾರಾದರೂ ಮೃತರಾದ ನಂತರ ಕಣ್ಣುಗಳನ್ನು ದಾನ ಮಾಡುವ ಪ್ರತಿಜ್ಞೆ ಮಾಡಿದ್ದೇವು. ಈ ಹಿಂದೆ ನನ್ನ ತಾಯಿ ತೀರಿಕೊಂಡಾಗ ಆ ರೀತಿ ದಾನ ಮಾಡಿದ್ದೇವು. ನನ್ನ ತಮ್ಮನು ಸಹ ದಾನ ಮಾಡುತ್ತೇನೆ ಆಸ್ಪತ್ರೆಗೆ ಪ್ರತಿಜ್ಞಾ ಪತ್ರ ನೀಡಿದ್ದ ಆದರೆ ಯಾವ ಆಸ್ಪತ್ರೆ ಎಂದು 1 ನೇ ಅರೋಪಿಗೆ ಕೇಳಿದ್ದು ಆಕೆ ಕೆ.ಎಲ್.ಇ. ಎಂದು ಹೇಳಿರುತ್ತಾಳೆ. ಅದರಂತೆ ಕೆ.ಎಲ್.ಇ. ಆಸ್ಪತ್ರೆಗೆ ಕರೆ ಮಾಡಿ ನನ್ನ ತಮ್ಮನ ಕಣ್ಣುಗಳನ್ನು ತೆಗೆದುಕೊಳ್ಳಲು ಹೇಳಿರುತ್ತೇವೆ ಅದರಂತೆ ಬಂದು ತೆಗೆದುಕೊಂಡು ಹೋಗಿರುತ್ತಾರೆ.

7. ಮರುದಿನ ದಿಃ 10.10.2024 ರ ಬೆಳಗ್ಗೆ 09.30 ಗಂಟೆಗೆ ನನ್ನ ತಮ್ಮನ ಶವವನ್ನು ಆಸ್ಪತ್ರೆಯಿಂದ ಆತನ ಮನೆಯ ಬಳಿ ತಂದಿರುತ್ತೇವೆ. ಆ ದಿನ ಬೆಳಗ್ಗೆ 11.30 ಗಂಟೆಗೆ ಚಾಸಾಃ 1 ಬೆಂಗಳೂರಿನಿಂದ ಬೆಳಗಾವಿಗೆ ಬಂದಿರುತ್ತಾಳೆ. ಆಕೆ ಬಂದ ನಂತರ ಶವವನ್ನು ಬೆಳಗಾವಿಯ ಸದಾಶಿವನಗರದಲ್ಲಿರುವ ಲಿಂಗಾಯತ ರುದ್ರಭೂಮಿಯಲ್ಲಿ ನಮ್ಮ ಲಿಂಗಾಯತ ಸಂಪ್ರದಾಯದ ಪ್ರಕಾರ ಹೂತು ಹಾಕಿರುತ್ತೇವೆ.

8. ದಿಃ 11.10.2024 ರ ಮುಂಜಾನೆ 07.00 ಗಂಟೆಗೆ ಚಾಸಾಃ 1, 26 ರವರು ನಮ್ಮ ಮನೆಗೆ ಬಂದರು. ಆಗ ಅವರಿಬ್ಬರೂ ನನಗೆ ಹೇಳಿದ್ದೇನೆಂದರೆ, ದಿಃ 10.10.2024 ರಂದು ಚಾಸಾಃ 26 ನನ್ನ ತಮ್ಮನ ಮನೆಯಲ್ಲಿ ಚಾಸಾಃ 1, 24, 25 ಹಾಗೂ 1 ನೇ ಆರೋಪಿಯವರ ಜೊತೆ ಮಲಗಲು ಹೋಗಿದ್ದು ಆಗ ಚಾಸಾಃ 24 ಮತ್ತು 25 ರವರು ಚಾಸಾಃ 1 ಹಾಗೂ 26 ರವರ ಬಳಿ ದಿಃ 09.10.2024 ರಂದು ಸಾಯಂಕಾಲ ಮನೆಯಲ್ಲಿ ಯಾವ ಘಟನೆ ನಡೆಯಿತು ಎಂದು ಹೇಳಿದರು ಎಂದು ಹೇಳಿರುತ್ತಾರೆ. ಅವರ ಪ್ರಕಾರ ದಿಃ 09.10.2024 ರ ಸಂಜೆ ಚಾಸಾಃ 24 ಆತನ ತಂದೆಯ ಜೊತೆ ಒಂದು ಕೋಣೆಯಲ್ಲಿ ಮಲಗಿದ್ದನಂತೆ ಆದರೆ 1 ನೇ ಆರೋಪಿಯು ಚಾಸಾಃ 24 ರವರನ್ನು ಹೇಗೋ ಮತ್ತೊಂದು ಕೋಣೆಗೆ ಚಾಸಾಃ 25 ರವರ ಜೊತೆ ತೆಗೆದುಕೊಂಡು ಹೋಗಿ ಮಲಗಿಸಿದ್ದರಂತೆ. ಆದರೆ ಸಂಜೆ 07.30 ಗಂಟೆಗೆ ಮನೆಯಲ್ಲಿ ಅವರ ತಂದೆ ಚೀರಾಡಿದ್ದು ಕೇಳಿಸಿತಂತೆ, ಆಗ ಚಾಸಾಃ 24 ಮತ್ತು 25 ರವರು ತಮ್ಮ ಕೋಣೆಯ ಬಾಗಿಲನ್ನು ತೆಗೆಯಲು ಪ್ರಯತ್ನಿಸಿದಾಗ ಅದು ಲಾಕ್ ಆಗಿತ್ತೆಂದು, ಬಾಗಿಲು ಬಡೆದರು ಸಹ ತೆಗೆಯಲಿಲ್ಲವಂತೆ, ಆದಾದ 10–15 ನಿಮಿಷದಲ್ಲಿ 1 ನೇ ಆರೋಪಿಯು ಬಂದು ಬಾಗಿಲು ತೆಗೆದಳು ಎಂದು ಹೇಳಿರುತ್ತಾರೆ. ಆಗ 1 ನೇ ಆರೋಪಿ ಚಾಸಾಃ 24, 25 ರವರು ಕೋಣೆಯಲ್ಲಿದ್ದ ಕಾಲಕ್ಕೆ ಆ ಕೋಣೆಯ ಬಾಗಿಲು ಅಟೋಮೆಟಿಕ್ ಆಗಿ ಲಾಕ್ ಆಗಿದ್ದು, ಆಗ 1 ನೇ ಆರೋಪಿಯು ಹಾಲ್ ನಲ್ಲಿದ್ದ ಯಾರಿಗೋ ಮಂಗಳೂರು ಭಾಷೆಯಲ್ಲಿ ಹೇಳಿ ಹೊರಗಿನಿಂದ ಬಂದು ಕಿಟಕಿಯಲ್ಲಿ ಕೀ ಪಡೆದು ಬಾಗಿಲಿನ ಲಾಕ್ ತೆಗೆಯುವಂತೆ ಹೇಳಿದ್ದು ಅದರಂತೆ ಆತ ಬಂದು ಕೀ ಪಡೆದುಕೊಂಡು ಬಾಗಿಲನ್ನು ತೆಗೆದರು ಎಂದು ಹೇಳಿರುತ್ತಾರೆಂದು ಹೇಳಿದರು. ಆಗ ಚಾಸಾಃ 24, 25 ರವರು ಬಾಗಿಲು ತೆಗೆದವನು ಮಾಸ್ಕ, ಗ್ಲೌಸ್ ಹಾಗೂ ಹಳದಿ ಟಿ–ಶರ್ಟ ಧರಿಸಿದ್ದು ಆತನನ್ನು ನೀನು ಯಾರು ಎಂದು ಕೇಳಿದರೆಂದು ಆತನು ತನ್ನ ಹೆಸರು ಮಹೇಶ ಎಂದು

ಹೇಳಿದನೆಂದು ಆ ಮಹೇಶ ಆ ಮನೆಯಲ್ಲಿ ಕೆಲಸ ಮಾಡುವವನ ಮಗನಾಗಿದ್ದು ಆದರೆ ಬಾಗಿಲು ತೆಗೆದವನು ಆ ಮಹೇಶ ಆಗಿರಲಿಲ್ಲವೆಂದು ಅದಕ್ಕಾಗಿ ನೀನು ಯಾರು ಎಂದು ಮತ್ತೇ ಪ್ರಶ್ನಿಸಿದಾಗ ಚಾಸಾಃ 24, 25 ರವರಿಗೆ ಬಾಗಿಲು ತೆಗೆದವನು ಶೋಭಿತಗೌಡಾ ಎಂದು ತಿಳಿಯಿತು ಎಂದು ಹೇಳಿದರು ಎಂದು ಹೇಳಿರುತ್ತಾರೆ. ಆ ಕಾಲಕ್ಕೆ ಹಾಲ್ ನಲ್ಲಿ ಮತ್ತೊಬ್ಬ ಇದ್ದು ಅವನು ಪವನ್ ಎಂಬಾತನು ಎಂದು ಸಹ ನನಗೆ ತಿಳಿಸಿದರು. ಆಗ 1 ನೇ ಆರೋಪಿಯು ಶೋಭಿತಗೌಡ ಹಾಗೂ ಪವನನ್ನು ಹೊರಗೆ ಕಳುಹಿಸಲು ಹೋದಾಗ ಚಾಸಾಃ 25 ರವರು ಮನೆಯಲ್ಲಿದ್ದ ಒಂದು ಮೊಬೈಲ್ ಫೋನ್ ತೆಗೆದುಕೊಂಡು ತನ್ನ ರೂಮ್ ಗೆ ಹೋದನೆಂದು ಆ ಕಾಲಕ್ಕೆ ಚಾಸಾಃ 24 ತನ್ನ ತಂದೆಯನ್ನು ಎಬ್ಬಿಸಲು ಪ್ರಯತ್ನಿಸಿದ್ದು, ಎಳಲಿಲ್ಲವೆಂದು ಆಗ ಆತನು ತನ್ನ ತಂದೆಗೆ ನೀರು ಕುಡಿಸಲು ಹೋದಾಗ 1 ನೇ ಆರೋಪಿಯು ಆತನಿಗೆ ಈಗ ನಿನ್ನ ತಂದೆ ಸಾರಾಯಿ ಕುಡಿದು ಮಲಗಿದ್ದು ಆತನಿಗೆ ನೀರು ಕುಡಿಸಿದರೆ ಎದೆನೋವು ಬರುತ್ತದೆ ಎಂದು ಹೇಳಿ ಚಾಸಾಃ 24, 25 ರವರನ್ನು ಮತ್ತೊಂದು ಕೋಣೆಗೆ ಕರೆದುಕೊಂಡು ಹೋಗಿ ಕೂಡಿ ಹಾಕಿರುತ್ತಾರೆಂದು ಹೇಳಿದರು ಎಂದು ತಿಳಿಸಿದರು.

9. ಚಾಸಾಃ 24, 25 ರವರು ತನ್ನ ತಾಯಿಯನ್ನು ಯಾಕೆ ನನ್ನ ತಂದೆ ಚೀರಾಡುತ್ತಿದ್ದರು ಎಂದು ಪ್ರಶ್ನಿಸಿದಾಗ ನಿನ್ನ ಮಾಮ ಬಂದು ನಿಮ್ಮ ತಂದೆಗೆ ಕರೆಂಟ್ ಶಾಕ್ ಕೊಟ್ಟಾಗ ನಿನ್ನ ತಂದೆ ಆ ರೀತಿ ಚೀರಿಕೊಂಡರು ಎಂದು ಹೇಳಿರುತ್ತಾಳೆ ಎಂಬುದನ್ನು ಸಹ ಅವರು ಹೇಳಿದರು ಎಂದು ತಿಳಿಸಿದರು.

10. ಇವೆಲ್ಲಾ ಘಟನೆಗಳಿಂದ ನನ್ನ ತಮ್ಮನ ಸಾವಿನಲ್ಲಿ ಏನೋ ಅನುಮಾನ ಇದೆ ಎಂದು ತಿಳಿದು, ನನ್ನ ತಮ್ಮನ ಮನೆಯ ಎದುರಿಗೆ ಇರುವ ಹಣ್ಣೇರಿ ರವರ ಮನೆಯ ಸಿಸಿಟಿವಿ ದೃಶ್ಯಾವಳಿಗಳನ್ನು ನಾನು ಹಾಗೂ ಚಾಸಾಃ 26 ರವರು ಪರೀಕ್ಷಿಸಿದೇವು. ಸಿಸಿಟಿವಿ ದೃಶ್ಯಾವಳಿಗಳನ್ನು ಪರೀಕ್ಷಿಸಿದಾಗ ದಿಃ 09.10.2024 ರಂದು ರಾತ್ರಿ 07.05 ನಿಮಿಷಕ್ಕೆ ಇಬ್ಬರು ವ್ಯಕ್ತಿಗಳು ಅನುಮಾನ್ವದವಾಗಿ ನನ್ನ ತಮ್ಮನ ಮನೆಗೆ ಹೋಗಿದ್ದನ್ನ ಗುರುತಿಸಿರುತ್ತೇವೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನದ ಕಲಾಪದ ಅವಧಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

11. ಆ ಇಬ್ಬರು ಸಂಶಯಾಸ್ಪದ ವ್ಯಕ್ತಿಗಳು ನನ್ನ ತಮ್ಮನ ಮನೆಗೆ ಹೋಗುವ ಮುನ್ನ ಮತ್ತೊಬ್ಬ ವ್ಯಕ್ತಿ ನನ್ನ ತಮ್ಮನ ಮನೆಯ ಒಳಗೆ ಹೋಗಿದ್ದ. ಆತ ಹೋದವನು ಇನ್ನೂ ಹೊರಗೆ ಬಂದಿರಲಿಲ್ಲ. ಆ ದಿನ ರಾತ್ರಿ 07.50 ನಿಮಿಷಕ್ಕೆ ನನ್ನ ತಮ್ಮನ ಮನೆಯಲ್ಲಿ ಕೆಲಸ ಮಾಡುವ ನಂದಾ ಕುರಿಯಾ ಅವಳ ಗಂಡ ಪ್ರಕಾಶ ಕುರಿಯಾ ದ್ವಿಚಕ್ರ ವಾಹನದಲ್ಲಿ ಬಂದು ನನ್ನ ತಮ್ಮನ ಮನೆಯ ಮುಂದೆ ನಿಲ್ಲಿಸಿ ಅವರು ಸಹ ಒಳಗೆ ಹೋಗುವುದನ್ನು ನೋಡಿರುತ್ತೇನೆ. ಅವರಿಬ್ಬರೂ ಮನೆಯ ಒಳಗೆ ಹೋದ 2 ನಿಮಿಷದಲ್ಲೇ ಈ ಹಿಂದೆ ಹೋಗಿದ್ದ ಇಬ್ಬರು ಅವರಲ್ಲಿ ಒಬ್ಬನು ಹಳದಿ ಟಿ-ಶರ್ಟ ಧರಿಸಿದ್ದ ಹಾಗೂ ಕೈಗೆ ಗ್ಲೌಸ್ ಹಾಕಿದ್ದ. ಮತ್ತೊಬ್ಬ ಬಿಳಿ ಬಣ್ಣದ ಟಿ-ಶರ್ಟ ಹಾಗೂ ಆತನು ಸಹ ತನ್ನ ಕೈಗೆ ಗ್ಲೌಸ್ ಹಾಕಿದ್ದ. ಆಗ ತುಂತುರು ಮಳೆ ಬರುತ್ತಿದ್ದರಿಂದ ಅವರಿಬ್ಬರೂ ಛತ್ರಿ ಹಿಡಿದು ಹೊರಗೆ ಬಂದು ನಡೆದುಕೊಂಡು ಹೋದರು. ಆ ನಂತರ 2-3 ನಿಮಿಷದಲ್ಲಿ ನನ್ನ ತಮ್ಮನ ಮನೆ ಕೆಲಸ ಮಹಿಳೆ ಹಾಗೂ ಆಕೆಯ ಗಂಡ ಸಹ ಹೊರಗೆ ಬಂದು ತಮ್ಮ ದ್ವಿಚಕ್ರ ವಾಹನದಲ್ಲಿ ಮರಳಿ ಹೋಗಿರುತ್ತಾರೆ.

12. ಈ ಎಲ್ಲಾ ಕಾರಣಗಳಿಂದ ದಿಃ 15.10.2024 ರಂದು ನಾನು ಹಾಗೂ ಚಾಸಾಃ 1 ರವರು ಮಾಳಮಾರುತಿ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ಸದರಿ ದೂರನ್ನು ಚಾಸಾಃ 1 ನೀಡಿರುತ್ತಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ನೋಡಿದ ಕಾಲಕ್ಕೆ ಚಾಸಾಃ 1 ರವರು ಹಳದಿ ಟಿ–ಶರ್ಟ ಧರಿಸಿ ಬಂದವನು ಶೋಭಿತಗೌಡ ಎಂದು ಗುರುತಿಸಿರುತ್ತಾಳೆ. ಆ ಕಾಲಕ್ಕೆ ಅವನ ಹೆಸರನ್ನು ದೂರಿನಲ್ಲಿ ಹೇಳಿರುತ್ತಾಳೆ. ದೂರಿನಲ್ಲಿ ಕೆಲಸದವರ ಮೇಲೆ ಹಾಗೂ ಶೋಭಿತಗೌಡಾ ಹಾಗೂ ಆತನ ಜೊತೆಯಲ್ಲಿ ಬಂದ ವ್ಯಕ್ತಿಗಳ ಮೇಲೆ ನನ್ನ ತಂದೆಯ ಕೊಲೆಯಲ್ಲಿ ಕೈವಾಡ ಇರಬಹುದು ಎಂದು ದೂರು ನೀಡಿದಳು. ದೂರು ನೀಡಿದ ನಂತರ ದಿಃ 16.10.2024 ರಂದು ಪೋಲೀಸರು ನನ್ನ ತಮ್ಮನ ಶವವನ್ನು ಹೊರ ತೆಗೆದಿರುತ್ತಾರೆ. ಆ ಕಾಲಕ್ಕೆ ನಾನು ಮತ್ತು ಚಾಸಾಃ 1 ನನ್ನ ತಮ್ಮನ ಶವವನ್ನು ಗುರುತಿಸಿ ಪೋಲೀಸರಿಗೆ ಹೇಳಿರುತ್ತೇವೆ.

13. ದಿಃ 17.10.2024 ರಂದು ಪೋಲೀಸರು ನನ್ನನ್ನು ಪೋಲೀಸ್ ಠಾಣೆಗೆ ಕರೆಸಿದ್ದರು. ಆ ಕಾಲಕ್ಕೆ 1 ನೇ ಆರೋಪಿ ಉಮಾ ಪದ್ಮಣ್ಣನವರ, 2 ನೇ ಆರೋಪಿ ಶೋಭಿತಗೌಡಾ, 3 ನೇ ಆರೋಪಿ ಪವನ ಪೋಲೀಸ್ ಠಾಣೆಯಲ್ಲಿದ್ದರು. ದಿಃ 09.10.2024 ರಂದು ಸುಮಾರು 07.05 ನಿಮಿಷ ಸುಮಾರಿಗೆ ನನ್ನ ತಮ್ಮನ ಮನೆಗೆ ಹೋದ ಇಬ್ಬರು ಇವರೇ ಎಂದು ನೋಡಿ ಗುರುತಿಸಿರುತ್ತೇನೆ. ಆ ಕಾಲಕ್ಕೆ ಪೋಲೀಸರು ಆರೋಪಿ 1 ರಿಂದ 3 ಹಾಗೂ ಒಬ್ಬ ಮಂಜುನಾಥ ಎಂಬುವವನೇ ಕೂಡಿಯೇ ನನ್ನ ತಮ್ಮನನ್ನು ಕೊಲೆ ಮಾಡಿರುತ್ತಾರೆ ಎಂದು ಹೇಳಿದೇನು.

14. ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರಾಗಿರುವ 3 ನೇ ಆರೋಪಿಯನ್ನು ನೋಡಿ ಈಗ ಪವರ ಎಂದು ಗುರುತಿಸುತ್ತಾರೆ. 5 ನೇ ಆರೋಪಿಯನ್ನು ನೋಡಿ ಈತ ಪ್ರಶಾಂತ ಎಂದು ಗುರುತಿಸುತ್ತಾರೆ. 4 ನೇ ಆರೋಪಿಯನ್ನು ನೋಡಿ ಈತ ಮಂಜುನಾಥ ಎಂದು ಗುರುತಿಸುತ್ತಾರೆ. 2 ನೇ ಆರೋಪಿಯನ್ನು ನೋಡಿ ಈತ ಶೋಭಿತಗೌಡಾ @ ಶೋಭರಾಜ ಎಂದು ಗುರುತಿಸುತ್ತಾರೆ. 1 ನೇ ಆರೋಪಿಯನ್ನು ನೋಡಿ ಈಕೆ ನನ್ನ ತಮ್ಮನ ಹೆಂಡತಿ ಉಮಾ ಎಂದು ಹೇಳುತ್ತಾರೆ.

15. ದಿಃ 19.10.2024 ರಂದು ಪೋಲೀಸರು ಮತ್ತೇ ನನ್ನನ್ನು ಠಾಣೆಗೆ ಕರೆಸಿದ್ದರು. ಆ ಕಾಲಕ್ಕೆ 4 ನೇ ಆರೋಪಿ ಮಂಜುನಾಥನನ್ನು ತೋರಿಸಿರುತ್ತಾರೆ. ಆಗ ಹೇಳಿದ್ದೇನೆಂದರೆ ಆತನು ನನ್ನ ತಮ್ಮನನ್ನು ಕೊಲೆ ಮಾಡಲು ನನ್ನ ತಮ್ಮನ ಹೆಂಡತಿಗೆ ನಿದ್ರೆ ಮಾತ್ರೆಯನ್ನು ನೀಡಿದ್ದು ಹಾಗೂ ನನ್ನ ತಮ್ಮನಿಗೆ ಇನ್ಸುಲಿನ್ ನೀಡಿ ಅವನಲ್ಲಿ ಸಕ್ಕರೆ ಪ್ರಮಾಣ ಕಡಿಮೆ ಮಾಡಿ ಹೃದಯಾಘಾತ ಮಾಡಲು ಸಹಾಯ ಮಾಡಿರುವ ವ್ಯಕ್ತಿ ಎಂದು ಹೇಳಿರುತ್ತಾರೆ.

16. ಸಾಕ್ಷಿಯು ಈಗ ಹಣ್ಣಿಕೇರಿ ರವರ ಮನೆಯ ಸಿಸಿಟಿವಿ ದೃಶ್ಯಾವಳಿಗಳನ್ನು ತೋರಿಸಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಆದ್ದರಿಂದ ಈಗ ಒಂದು ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆಯಲಾಗಿದ್ದು, ಅದರಲ್ಲಿ RFSL ಹುಬ್ಬಳ್ಳಿ ಮಾದರಿ ಇರುವ ಒಂದು ಚೀಟಿ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಮಯ ಕಲಂ 63(4)(ಸಿ) ಅಡಿಯಲ್ಲಿ ನೀಡಿರುವ ಒಂದು ತೋಶಿಬಾ ಕಂಪನಿಯ ಹಾರ್ಡ್ ಡಿಸ್ಕ ಇದೆ. ಸದರಿ ಹಾರ್ಡ್ ಡಿಸ್ಕನ್ನು ಮುಕ್ತ ನ್ಯಾಯಾಲಯದಲ್ಲಿ ಪ್ಲೇ ಮಾಡಿದ್ದು ಅದರಲ್ಲಿ ದಿಃ 09.10.2024 ರ ಸಾಯಂಕಾಲ 07.03 ನಿಮಿಷದ ಸಮಯಕ್ಕೆ ನನ್ನ ತಮ್ಮನ ಮನೆಯ ಮುಂದೆ ಇರುವ ರಸ್ತೆಯ ಮುಂದೆ ಮೇಲಿನಿಂದ ಇಬ್ಬರು ನಡೆದುಕೊಂಡು ಬರುತ್ತಿರುವವರಲ್ಲಿ ಹಳದಿ ಬಣ್ಣದ ಟಿ–ಶರ್ಟ ಧರಿಸಿ ಛತ್ರಿ ಹಿಡಿದಿರುವವನು 2 ನೇ ಆರೋಪಿ ಶೋಭಿತಗೌಡನೆಂದು, ಅವನ ಪಕ್ಕದಲ್ಲಿರುವ ಹೂಡಿ ಟಿ–ಶರ್ಟ ಧರಿಸಿರುವ ವ್ಯಕ್ತಿ ಪವನ ಎಂದು ಸಾಕ್ಷಿ ಗುರುತಿಸಿರುತ್ತಾರೆ. ಆ ಆರೋಪಿಗಳು ಮನೆಯ ಮುಂದೆ ಸಾಗುತ್ತಾರೆ ಆ ಕಾಲಕ್ಕೆ ಅವರ ಎದುರುನಿಂದ ಬಂದ ವ್ಯಕ್ತಿ ಟಿ–ಶರ್ಟ ಧರಿಸಿದ್ದು ಅವನು ಮನೆಯ ಒಳಗೆ ಹೋಗಿದ್ದು ಆತನನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇತನು 4 ನೇ ಆರೋಪಿ ಮಂಜುನಾಥ ಎಂದು ಗುರುತಿಸುತ್ತಾರೆ. ಈ ಹಿಂದೆ ಇಬ್ಬರು ರಸ್ತೆಯಿಂದ ಕೆಳಗೆ ಹೋದವರು ಮತ್ತೇ ಮರಳಿ ಬಂದು 07.05:37 ಸೆಕೆಂಡಿಗೆ ಕೊಡೆ ಹಿಡಿದವ ಹಳದಿ ಬಣ್ಣದ ಟಿ–ಶರ್ಟ ಧರಿಸಿದ್ದ ವ್ಯಕ್ತಿ ಹಾಗೂ ಹೂಡಿ ಟಿಶರ್ಟ ಧರಿಸಿದ್ದ ವ್ಯಕ್ತಿಗಳು ಈಗ ನನ್ನ ತಮ್ಮನ ಮನೆಯ ಒಳಗೆ ಹೋದರು ಎಂದು ಹೇಳುತ್ತಾರೆ.

17. ಸದರಿ ವಿಡಿಯೋ ಸಮಯ 07.54:52 ಕ್ಕೆ ಒಂದು ಬಿಳಿ ಸ್ಕೂಟರ್ ನಲ್ಲಿ ಒಬ್ಬ ಗಂಡಸು ಚಾಲನೆ ಮಾಡಿಕೊಂಡು ಹಿಂಬದಿಯಲ್ಲಿ ಒಬ್ಬ ಹೆಂಗಸು ಬಂದು ನನ್ನ ತಮ್ಮನ

ಮನೆಯ ಮುಂದೆ ನಿಲ್ಲಿಸಿರುವವರು, ನನ್ನ ತಮ್ಮನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರ್ತಿ ನಂದಾ ಕುರಿಯಾ ಹಾಗೂ ಆಕೆಯ ಗಂಡ ಪ್ರಕಾಶ ಕುರಿಯಾ ಎಂದು ಹೇಳುತ್ತಾರೆ. ಅವರಿಬ್ಬರೂ ಗಾಡಿ ನಿಲ್ಲಿಸಿ ಮನೆಯ ಒಳಗೆ ಹೋಗುತ್ತಾರೆ. ತಕ್ಷಣ ಈ ಹಿಂದೆ ಹಳದಿ ಬಣ್ಣದ ಟಿ–ಶರ್ಟ ಹಾಗೂ ಹೂಡಿ ಟಿ–ಶರ್ಟ ಧರಿಸಿ ಹೋಗಿದ್ದ ವ್ಯಕ್ತಿಗಳು ಹೊರ ಬರುತ್ತಾರೆ. ಅವರಲ್ಲಿ ಈ ಬಾರಿ ಹೂಡಿ ಟಿ–ಶರ್ಟ ಧರಿಸಿದ್ದ ವ್ಯಕ್ತಿ ಕೊಡೆ ಹಿಡಿದು ಹೊರ ಬಂದು ರಸ್ತೆಯಲ್ಲಿ ಹೋಗುತ್ತಾರೆ. ಹಾರ್ಡ್ ಡಿಸ್ಕನ್ನು ಈಗ ನಿಪಿಃ 4 ಎಂದು ಗುರುತಿಸಲಾಯಿತು. ಸದರಿ ಪ್ಯಾಕೇಟನಲ್ಲಿದ್ದ ವಿಧಿವಿಜ್ಞಾನ ಪ್ರಯೋಗಾಲಯದವರು ನೀಡಿರುವ ಪ್ರಮಾಣ ಪತ್ರ ಹಾಗೂ ಸ್ಯಾಂಪಲ್ ಸೀಲ್ ಇರುವ ಚೀಟಿಯನ್ನು ಗುರುತಿಗಾಗಿ ಈಗ ನಿಪಿಃ 4(ಎ) ಎಂದು ಗುರುತಿಸಲಾಯಿತು. RFSL ಹುಬ್ಬಳಳ್ಳಿ ರವರು ನೀಡಿರುವ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ರಲ್ಲಿನ ಪ್ರಮಾಣ ಪತ್ರವನ್ನು ಹಾಗೂ ಮಾದರಿ ಸೀಲ್ ನ ಚೀಟಿಯನ್ನು ಗುರುತಿಗಾಗಿ ಈಗ ನಿಪಿಃ 5 ಮತ್ತು 6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಈ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ದಿಃ 15.10.2025 ರಂದು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.